**ವಾತಾವರಣ**

ಕನಿಷ್ಠ 23, ಗರಿಷ್ಠ 29 ಡಿಗ್ರಿ ಉಷ್ಣಾಂಶವಿದ್ದು, ಮೋಡ ಕವಿದ ವಾತಾವರಣದ ಜತೆಗೆ ಆಗಾಗ ಮಳೆಯಾಗಲಿದೆ.

## ಮಿನಿ ಲಾರಿ ಡಿಕ್ಕಿ: ಸಹೋದರಿ ಸಾವು

ಬೆಂಗಳೂರು: ಬೈಕ್‌ಗೆ ಮಿನಿಲಾರಿಯೊಂದು ಡಿಕ್ಕಿ ಹೊಡೆದ ಪರಿಣಾಮ ತಂಗಿ ಮೃತಪಟ್ಟು, ಸಹೋದರರಿಬ್ಬರು ಗಾಯಗೊಂಡಿರುವ ಘಟನೆ ಹುಳಿಮಾವು ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಭಾನುವಾರ ಮುಂಜಾನೆ ನಡೆದಿದೆ. ಎಲೆಕ್ಟ್ರಾನಿಕ್ ಸಿಟಿಯ ಕೂಡ್ಲುವಿನ ಸಂಧ್ಯಾ (22) ಮೃತರು. ಮೃತರ ಅಣ್ಣ ಶಶಿಕುಮಾರ್ ಹಾಗೂ ತಮ್ಮ ಸಂತೋಷ್ ಕೂಡ ಗಾಯಗೊಂಡಿದ್ದು, ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಸಂಧ್ಯಾ ಅವರ ದೊಡ್ಡಮ್ಮ ಪಾವಗಡದಲ್ಲಿ ನಿಧನರಾಗಿದ್ದು, ಅವರ ಅಂತ್ಯಸಂಸ್ಕಾರದಲ್ಲಿ ಪಾಲ್ಗೊಳ್ಳಲು ಸಹೋದರರೊಂದಿಗೆ ಬೈಕ್‌ನಲ್ಲಿ ಹೋಗುತ್ತಿದ್ದಾಗ ಈ ದುರ್ಘಟನೆ ಸಂಭವಿಸಿದೆ.

9 ದಿನದಲ್ಲಿ ಶಾಶ್ವತ ಪರಿಹಾರ

2ನೇ ಹಂತ

ಜೆ.ಪಿ. ನಗರ, ಬೆಂಗಳೂರು

84318 04922

ವಿ+

ಸೋಮವಾರ

ವಿಶ್ವವಾಣಿ

ಪತ್ರಿಕೆ ಬರುತ್ತಿಲ್ಲವೇ?

ಆತ್ಮೀಯ ಓದುಗರೇ, ವಿಶ್ವವಾಣಿ ಪತ್ರಿಕೆಯ ಚಂದಾದಾರರಾಗಲು ಅಥವಾ ಪತ್ರಿಕೆಯ ಸರಬರಾಜಿನಲ್ಲಿ ಸಮಸ್ಯೆ ಇದ್ದಲ್ಲಿ ಕೂಡಲೇ ಸಂಪರ್ಕಿಸಿ

ಪ್ರಸರಣ ವಿಭಾಗ

6362393959

circulation@vishwavani.news

ಶ್ರೀ ಸ್ಕಂದ ಶಿಕ್ಷಣ ಸಂಸ್ಥೆ

ADMISSION OPEN

ಕೋರ್ಸ್:

SSLC/PUC & NTT/D.Ed.

(Both Regular & Correspondence)

DEGREE/PG/B.Ed.

(Both Regular & Correspondence)

NEW HORIZON PUBLIC SCHOOL

#1239, 3rd Stage, Beml Layout

RR Nagar, Bangalore-560098

CONTACT 7411035887

B.S. SUMA

Principal

# ಮಹಿಳೆಯರು ಅವಲಂಬಿತರಾಗಬಾರದು: ಕಿರಣ್ ಬೇಡಿ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಮಹಿಳೆಯರು ಇತರರ ಮೇಲೆ ಅವಲಂಬಿತರಾಗುವ ಮನಸ್ಥಿತಿಯಿಂದ ಹೊರಬಂದು, ತನ್ನದೇ ಆದ ನಿರ್ಧಾರಗಳನ್ನು ತೆಗೆದುಕೊಂಡು ಅದಕ್ಕೆ ಬದ್ಧವಾಗಿರುವುದನ್ನು ಕಲಿಯಬೇಕು ಎಂದು ಪುದುಚೇರಿ ಲೆಫ್ಟಿನೆಂಟ್ ಗವರ್ನರ್ ಕಿರಣ್ ಬೇಡಿ ಕರೆ ನೀಡಿದರು.

ನಗರದ ಭಾರತೀಯ ವಿಜ್ಞಾನ ಸಂಸ್ಥೆಯ ಜೆ.ಎನ್.ಟಾಟಾ ಸಭಾಂಗಣದಲ್ಲಿ ಭಾನುವಾರ ಬಯೋ ಜೆನೆಸಿಸ್ ಹೆಲ್ತ್ ಕ್ಲಸ್ಟರ್ ಸಂಯುಕ್ತಾಶ್ರಯದಲ್ಲಿ ನಡೆದ ಐದನೇ ವಿಶ್ವ ಮಹಿಳಾ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಮಹಿಳೆಯರು ಹುಟ್ಟಿನಿಂದಲೇ ನಾಯಕತ್ವ ಹಾಗೂ ಜವಾಬ್ದಾರಿಯ ಗುಣಗಳನ್ನು ಹೊಂದಿರುತ್ತಾರೆ. ಜೀವನದ ಅನುಭವಕ್ಕೆ ತಕ್ಕಂತೆ ಕಲಿಯುತ್ತಾ ಸಾಗುತ್ತಾರೆ. ಈ ಹಂತದಲ್ಲಿ ಅವರು ಸ್ವಾವಲಂಬಿಯಾಗಲು ಹಾಗೂ ತನ್ನ ಬದುಕಿನ ಜವಾಬ್ದಾರಿ ಹೊರಲು ಕಲಿಯಬೇಕು ಎಂದರು.



ಭಾರತೀಯ ವಿಜ್ಞಾನ ಸಂಸ್ಥೆಯ ಜೆ.ಎನ್.ಟಾಟಾ ಸಭಾಂಗಣದಲ್ಲಿ ಭಾನುವಾರ ಬಯೋ ಜೆನೆಸಿಸ್ ಹೆಲ್ತ್ ಕ್ಲಸ್ಟರ್ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಐದನೇ ವಿಶ್ವ ಮಹಿಳಾ ಸಮಾವೇಶದಲ್ಲಿ ಪುದುಚೇರಿ ಲೆಫ್ಟಿನೆಂಟ್ ಗವರ್ನರ್ ಕಿರಣ್ ಬೇಡಿ ಭಾಗವಹಿಸಿದ್ದರು. ಈ ವೇಳೆ ಬಯೋಕಾನ್ ಮುಖ್ಯಸ್ಥೆ ಕಿರಣ್ ಮಜುಂದಾರ್ ಷಾ, ಮಹಿಳಾ ಸಮಾವೇಶದ ಅಧ್ಯಕ್ಷೆ ಡಾ. ಕಾಮಿನಿ ಎ.ರಾವ್ ಇದ್ದರು.

ಹೆಣ್ಣು ಮಕ್ಕಳು ತಮ್ಮ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಕುರಿತು ಹೆಚ್ಚಿನ ಗಮನ ಹರಿಸಬೇಕು. ಆರೋಗ್ಯವಂತ ಮನಸ್ಸು, ಮನೆ ಹಾಗೂ ಸಮಾಜವನ್ನು ಆರೋಗ್ಯಪೂರ್ಣವಾಗಿಸುತ್ತದೆ. ಜೀವನವೇ ಒಂದು ಸಿದ್ಧತೆಯಾಗಿದ್ದು, ನಿರ್ದಿಷ್ಟ ಕಾರಣಗಳಿಗೆ ಸದಾ ಸಿದ್ಧರಾಗುತ್ತ ಸಾಗಬೇಕು. ಜನರೊಂದಿಗೆ ಬೆರೆಯಿರಿ, ಹೊಸತನವನ್ನು ಹುಡುಕಿ. ಪ್ರಯತ್ನವೇ ಯಶಸ್ಸಿನ ದಾರಿಯಾಗಿದೆ ಎಂದರು.

ಸಾಧನೆಯ ಹಾದಿಯಲ್ಲಿ ಸಾಗುವಾಗ ಗಂಡು ಹೆಣ್ಣೆಂಬ ತಾರತಮ್ಯ ಮರೆತು ಕೆಲಸ ನಿರ್ವಹಿಸಬೇಕು. ಯಶಸ್ಸಿಗೆ ಅಗತ್ಯವಾದ ಎಲ್ಲ ಧೈರ್ಯ, ಛಲ, ಕೌಶಲ್ಯಗಳನ್ನು ಮೈಗೂಡಿಸಿಕೊಳ್ಳಿ. ಆದರೆ, ಇದೆಲ್ಲದರ ನಡುವೆ, ಹೆಣ್ಣಿನ ಜನ್ಮದತ್ತವಾಗಿರುವ ಕರುಣೆ, ಸಹನೆಯನ್ನು ಕೂಡ ಮರೆಯದಿರಿ. ಲಿಂಗಭೇದ ಮರೆತು ಉತ್ತಮ ವ್ಯಕ್ತಿಯಾಗುವತ್ತ ಗಮನ ಹರಿಸಿಕೊಳ್ಳಿ ಎಂದು ಸಲಹೆ ನೀಡಿದರು.

ಮೈಸೂರು ರಾಜವಂಶಸ್ಥೆ ಪ್ರಮೋದಾ ದೇವಿ ಒಡೆಯರ್ ಮಾತನಾಡಿ, ಆಗಿನ ಕಾಲದಲ್ಲಿ ಸಾಕಷ್ಟು ಸ್ವಾತಂತ್ರ್ಯವಿತ್ತು. ಎಲ್ಲರೂ ಒಂದೇ ಎಂಬ ಭಾವನೆ ಇತ್ತು. ಆದರೆ ಈಗ ಎಲ್ಲವೂ ಬದಲಾಗಿದೆ. ಸಂಸ್ಕೃತಿಯ ಜತೆಗೆ ಕೆಲ ವಿಷಯಗಳನ್ನು ಉಳಿಸುವ ಜವಾಬ್ದಾರಿ ಮಹಿಳೆಯರದ್ದಾಗಿದೆ. ಕೆಲಭಾಗಗಳಲ್ಲಿ ಮಹಿಳೆಯರಿಗೆ ಆದ್ಯತೆ ನೀಡಬೇಕು. ಮಹಿಳೆಯರು ಆರೋಗ್ಯದ ಕಡೆ ಗಮನಹರಿಸಬೇಕು ಎಂದು ಕಿವಿ ಮಾತು ಹೇಳಿದರು.

ಕಾರ್ಯಕ್ರಮದಲ್ಲಿ ಐಪಿಎಸ್ ಅಧಿಕಾರಿಗಳಾದ ಡಾ. ರಶ್ಮಿ ಕೃಷ್ಣನ್, ಡಾ.ಕಲ್ಪನಾ ಗೋಪಾಲನ್, ಡಾ.ಸೌಮ್ಯ ಮಿಶ್ರಾ, ಬಯೋಕಾನ್ ಮುಖ್ಯಸ್ಥೆ ಕಿರಣ್ ಮಜುಂದಾರ್ ಷಾ ವಿಶ್ವ ಮಹಿಳಾ ಸಮಾವೇಶದ ಅಧ್ಯಕ್ಷೆ ಡಾ. ಕಾಮಿನಿ ಎ.ರಾವ್, ಕಾರ್ಯದರ್ಶಿ ಡಾ.ಪದ್ಮಿನಿ ಪ್ರಸಾದ್ ಭಾಗವಹಿಸಿದ್ದರು.

### ಪೋಷಕರಂತೆ ಸಂತೈಸಿದ ಮೋದಿ

ಚಂದ್ರಯಾನ -2 ಯೋಜನೆ ಕೊನೆ ಕ್ಷಣದಲ್ಲಿ ಅಂದುಕೊಂಡಂತೆ ನಡೆಯದಾಗ ದುಃಖಿತಪ್ತ ಇಸ್ರೋ ಅಧ್ಯಕ್ಷರನ್ನು ಪ್ರಧಾನಿ ಮೋದಿ ಅವರು ತಾಯಿಯಂತೆ ಸಂತೈಸಿದರು. ನಂತರ, ತಂದೆಯಂತೆ ಧೈರ್ಯವಾಗಿ ನಿಂತು ವಿಜ್ಞಾನಿಗಳನ್ನು ಭರವಸೆ ತುಂಬಿದರು ಎಂದು ಕಿರಣ್ ಬೇಡಿ ಶ್ಲಾಘಿಸಿದರು.

> ಲೆಫ್ಟಿನೆಂಟ್ ಗವರ್ನರ್ ಆಗಿ ನಾನು ವಿವಾದಿತ ವ್ಯಕ್ತಿಯಲ್ಲಿದ್ದೇನೆ. ದಿನನಿತ್ಯ ನಾನು ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಸುತ್ತೇನೆ. ನನ್ನ ಬಗ್ಗೆ ತಿಳಿದಿದ್ದರೂ, ಕೆಲವರು ನನ್ನನ್ನು ಆ ದಾರಿಗೆ ಎಳೆಯಲು ಯತ್ನಿಸುತ್ತಾರೆ. ಆದರೆ, ವಿಫಲವಾಗುತ್ತಾರೆ.
>
> **- ಕಿರಣ್ ಬೇಡಿ**
>
> ಪುದುಚೇರಿ ಲೆಫ್ಟಿನೆಂಟ್ ಗವರ್ನರ್